# ಸ್ವಾಮಿ ವಿವೇಕಾನಂದರ ದಿವ್ಯಸ್ಮೃತಿ



ನಾಗೇಂದ್ರನಾಥ ಗುಪ್ತ

**ಸ್ವಾಮಿ ವಿವೇಕಾನಂದರ** ದೇಹತ್ಯಾಗವಾಗಿ ಇಪ್ಪತ್ತೈದು ವರ್ಷಗಳು ಸಂದವು (ಇದನ್ನು ಬರೆದದ್ದು ೧೯೨೭ರಲ್ಲಿ). ವರ್ಷಗಳು ಕಳೆದಂತೆ ಅವರ ಹಿರಿಮೆಯ ಹೊಸ ಮುಖಗಳು ಬೆಳಕಿಗೆ ಬರುತ್ತಿವೆ ಮತ್ತು ಅವರ ಪ್ರಶಂಸಾವ್ಯಾಪ್ತಿಯೂ ವಿಸ್ತರಿಸುತ್ತಿದೆ. ಆದರೆ ಅವರು ಜೀವಂತವಿದ್ದಾಗ ಅವರನ್ನು ನೋಡಿದವರೂ, ಅವರ ಮಾತನ್ನು ಕೇಳಿದವರೂ ಕಣ್ಮರೆಯಾಗುತ್ತಿದ್ದಾರೆ. ಈಗ ಬದುಕಿ ಉಳಿದಿರುವ ಅವರ ಸಮಕಾಲೀನರು, ಭಾರತದಲ್ಲಿಯೇ ಏಕೆ, ಜಗತ್ತಿನಲ್ಲಿಯೇ ಮಹೋನ್ನತ ವ್ಯಕ್ತಿಗಳಲ್ಲಿ ಒಬ್ಬರಾದ ಸ್ವಾಮೀಜಿಯವರ ಸ್ಮೃತಿ ಚಿತ್ರವನ್ನು ಬರೆದಿಡುವುದರಿಂದ ದೇಶದ ಜನತೆಗೆ ದೊಡ್ಡ ಸೇವೆ ಸಲ್ಲಿಸಿದಂತಾಗುವುದು ಮತ್ತು ಅವರ ಪುಣ್ಯಸ್ಮೃತಿಗೆ ಒಂದು ಕಾಣಿಕೆ ಸಲ್ಲಿಸಿದಂತಾಗುವುದು. ಅವರ ಜೀವನ ಕಥೆಯನ್ನು ಪುನರುಚ್ಚರಿಸುವ ಅವಶ್ಯಕತೆಯಿಲ್ಲ. ಏಕೆಂದರೆ ಅವರ ಸವಿಸ್ತಾರ ಜೀವನ ಚರಿತ್ರೆಯನ್ನು ಅವರ ಶಿಷ್ಯರು ಆಗಲೇ ಸಂಗ್ರಹಿಸಿ ಬರೆದಿರುವರು. ಆದರೆ ನನ್ನಂತೆ ಅವರನ್ನು ತಿಳಿದವರು ತಾವು ಅವರನ್ನು ವೈಯಕ್ತಿಕವಾಗಿ ಕಂಡಂತೆ ಅವರ ವ್ಯಕ್ತಿತ್ವವನ್ನು ಚಿತ್ರಿಸುವುದು ಲೇಸು, ತಮ್ಮ ಸ್ಮೃತಿಗೆಟುಕುವಷ್ಟು, ಸಾಮಾನ್ಯವೆನಿಸಿದರೂ ತುಂಬ ವೈಶಿಷ್ಟ್ಯಪೂರ್ಣ ಘಟನೆಗಳ ಮೂಲಕ ಅವರನ್ನು ಇತರರಿಂದ ಪ್ರತ್ಯೇಕಿಸುವ ಅವರ ವ್ಯಕ್ತಿತ್ವದ ವಿಶಿಷ್ಟ ಲಕ್ಷಣಗಳನ್ನು ಚಿತ್ರಿಸುವುದು ಉಚಿತ. ನಾನು ಅವರನ್ನು ಚಿಕ್ಕಂದಿನಿಂದಲೂ ಬಲ್ಲೆ, ಏಕೆಂದರೆ ಅವರೊಡನೆ ಕಾಲೇಜಿನಲ್ಲಿ ಓದುತ್ತಿದ್ದೆ; ಮತ್ತೆ ಅವರು ಉಜ್ವಲ ಕೀರ್ತಿ ವೈಭವದಿಂದ ಬೆಳಗುತ್ತ ಅಮೆರಿಕದಿಂದ ಭಾರತಕ್ಕೆ ಮರಳಿದಾಗಲೂ ಅವರನ್ನು ಬಲ್ಲೆ. ಅವರು ನನ್ನೊಡನೆ ಕೆಲವು ದಿನ ಕಳೆದರು ಮತ್ತು ನಾವಿಬ್ಬರು ಪರಸ್ಪರ ಅಗಲಿದಾಗಿನಿಂದ ನಡೆದುದೆಲ್ಲವನ್ನೂ ಮುಚ್ಚು ಮರೆಯಿಲ್ಲದೆ ಹೇಳಿದರು. ಕೊನೆಯಲ್ಲಿ ಅವರ ದೇಹಾವಸಾನಕ್ಕೆ ಸ್ವಲ್ಪ ಮುಂಚೆ ಕಲಕತ್ತೆಯ ಹತ್ತಿರ ಬೇಲೂರು ಮಠದಲ್ಲಿ ನಾನವರನ್ನು ಸಂಧಿಸಿದೆ.

೧೮೮೬ರಲ್ಲಿ ಸ್ವಾಮಿ ವಿವೇಕಾನಂದರು ವಿದೇಶಕ್ಕೆ ಹೋಗುವುದಕ್ಕೆ ಮುಂಚೆ ನಾನು ಅವರನ್ನೊಮ್ಮೆ ಭೇಟಿಯಾಗಿದ್ದೆ. ನಾನು ಕಲಕತ್ತೆಗೆ ಹೋಗಿದ್ದಾಗ ರಾಮಕೃಷ್ಣ ಪರಮಹಂಸರು ಮಹಾಸಮಾಧಿಯನ್ನೈದಿದರೆಂಬ ಸುದ್ದಿ ಕೇಳಿದಾಕ್ಷಣ ಕಾಶಿಪುರಕ್ಕೆ ಧಾವಿಸಿದೆ. ಅಲ್ಲಿ ಅವರ ಮೃತದೇಹ ಇನ್ನೂ ಹಾಸಿಗೆಯ ಮೇಲಿತ್ತು, ಮುಖ ಶಾಂತಿಯುಕ್ತವಾಗಿತ್ತು. ಸುತ್ತ ಅನೇಕ ಶಿಷ್ಯರು ನೆರೆದಿದ್ದರು. ಅವರಲ್ಲಿ ವಿವೇಕಾನಂದರೂ ಇದ್ದರು. ಸುತ್ತಲೂ ಶಾಂತ ನೀರವ ವಾತಾವರಣ, ಗಿಡಮರಗಳು, ನಸುಗೆಂಪಿನ ಮುಸ್ಸಂಜೆ, ನಿಧಾನವಾಗಿ ಚಲಿಸುವ ಮೋಡಗಳು ಆ ದುಃಖದಲ್ಲಿ ಪಾಲ್ಗೊಂಡಂತಿದ್ದವು. ನಾವು ಹೀಗೆ ಸಾವಿನ ಮುಂದೆ ಮೌನವಾಗಿ ಕೈಕಟ್ಟಿಕೊಂಡು ನಿಂತಿರುವಾಗ ದೇವತೆಗಳು ಪುಷ್ಪವೃಷ್ಟಿ ಸುರಿಸುವಂತೆ ಕೆಲವು ಮಳೆಹನಿಯಾಯಿತು. ರಾಮಕೃಷ್ಣ ಪರಮಹಂಸರು ಬದುಕಿರುವಾಗ ಮತ್ತೆ ಸಾವಿನಲ್ಲಿ ಅವರ ಮುಖದಲ್ಲಿದ್ದ ಪ್ರಶಾಂತತೆಯನ್ನು ನೋಡುವುದು ಒಂದು ಮಹಾಸೌಭಾಗ್ಯ.

ನಾನು ಮತ್ತೆ ವಿವೇಕಾನಂದರನ್ನು ಭೇಟಿಯಾದದ್ದು ಹನ್ನೊಂದು ವರ್ಷಗಳ ನಂತರ ೧೮೯೭ರಲ್ಲಿ. ಆಗವರು ಪ್ರಾಚ್ಯ-ಪಾಶ್ಚಾತ್ಯಗಳೆರಡರಲ್ಲೂ ಸುಪ್ರಸಿದ್ಧರಾಗಿದ್ದರು. ಅವರು ಅನೇಕ ದೇಶಗಳಲ್ಲಿ ಓಡಾಡಿದ್ದರು. ಅನೇಕ ಬಗೆಯ ವ್ಯಕ್ತಿಗಳ ಪರಿಚಯ ಅವರಿಗಿತ್ತು. ನಾನಾಗ ಲಾಹೋರಿನಲ್ಲಿದ್ದೆ. ಅವರು ಧರ್ಮಶಾಲೆಯ ಪರ್ವತಾವಾಸದಲ್ಲಿದ್ದಾರೆಂದು ಕೇಳಿದೆ. ಅಲ್ಲಿಂದ ಅವರು ಜಮ್ಮುವಿಗೆ ಭೇಟಿಯಿತ್ತು ಅನಂತರ ಲಾಹೋರಿಗೆ ಬಂದರು. ರೈಲ್ವೆ ನಿಲ್ದಾಣದಲ್ಲಿ ರೈಲು ಬಂದು ನಿಂತಾಗ ಒಬ್ಬ ಇಂಗ್ಲಿಷ್ ಸೈನಿಕಾಧಿಕಾರಿ ಮೊದಲ ತರಗತಿಯ ಬೋಗಿಯಿಂದ ಹೊರಗೆ ಬಂದು ಗೌರವಪೂರ್ವಕವಾಗಿ ಇನ್ನೊಬ್ಬರಿಗಾಗಿ ಬಾಗಿಲನ್ನು ತೆರೆದುದನ್ನು ನೋಡಿದೆ. ಅನಂತರ ಕೆಳಗಿಳಿದು ಬಂದವರು ಸ್ವಾಮಿ ವಿವೇಕಾನಂದರು. ಆ ಅಧಿಕಾರಿ ಸ್ವಾಮೀಜಿಗೆ ವಂದಿಸಿ ಹೊರಟುಹೋಗುವುದರಲ್ಲಿದ್ದಾಗ

ಸ್ವಾಮೀಜಿಯವರು ವಿಶ್ವಾಸಪೂರ್ವಕವಾಗಿ ಅವನ ಕೈಕುಲುಕಿ ಅಭಿನಂದಿಸಿದರು. ಅನಂತರ ನಾನು ಕೇಳಿದಾಗ ವೈಯಕ್ತಿಕವಾಗಿ ಆ ಅಧಿಕಾರಿಯ ಪರಿಚಯ ತಮಗಿಲ್ಲವೆಂದರು ಸ್ವಾಮೀಜಿ. ಅವನು ರೈಲಿನಲ್ಲಿ ಸ್ವಾಮೀಜಿಯವರನ್ನು ಭೇಟಿಯಾದದ್ದು ಮತ್ತು ಇಂಗ್ಲೆಂಡ್‌ನಲ್ಲಿ ಅವರ ಕೆಲವು ಉಪನ್ಯಾಸಗಳನ್ನು ಕೇಳಿದ್ದನಂತೆ.

ಅಂದೇ ರಾತ್ರಿ ವಿವೇಕಾನಂದರು ತಮ್ಮ ಇಬ್ಬರು ಶಿಷ್ಯರೊಡನೆ ನನ್ನ ಮನೆಗೆ ಬಂದರು. ಅಂದು ಮತ್ತು ಮುಂದೆ ಅವರನ್ನು ಭೇಟಿಯಾದಾಗಲೆಲ್ಲ ನಾನು ಅವರೊಡನೆ ಬಹಳ ಹೊತ್ತು ಮಾತನಾಡಿದೆ. ಮುಖ್ಯವಾಗಿ ನನ್ನ ಗಮನಕ್ಕೆ ಬಂದದ್ದು ಅವರ ಭಾವನೆಯ ಗಭೀರತೆ ಮತ್ತು ದೇಶದ ಬಗ್ಗೆ ಅವರಿಗಿದ್ದ ತೀವ್ರವಾದ ಕಳಕಳಿ. ಅವರಲ್ಲಿ ಆಧ್ಯಾತ್ಮಿಕ ಔನ್ನತ್ಯ ಮತ್ತು ಬೌದ್ಧಿಕ ಪ್ರತಿಭೆ ಸಮ್ಮಿಳನಗೊಂಡಿದ್ದವು. ಅವರು ಅನೇಕ ಸಮಸ್ಯೆಗಳನ್ನು ಕುರಿತು ದೀರ್ಘ ಚಿಂತನೆ ನಡೆಸಿ ಅವುಗಳಿಗೆ ಪರಿಹಾರವನ್ನು ಕಂಡುಹಿಡಿದಿದ್ದರು. ಅವರದೇ ವಿಶಿಷ್ಟವಾದ ಪ್ರವಾದಿಯ ದೃಷ್ಟಿ ಅವರದಾಗಿತ್ತು. ಅವರೆಂದರು: "ಭಾರತದಲ್ಲಿ ಮಧ್ಯಮ ವರ್ಗದವರ ಶಕ್ತಿಯೆಲ್ಲ ಬತ್ತಿ ಹೋಗಿದೆ. ಸುದೀರ್ಘ ಸಾಧನೆಗೆ ಬೇಕಾಗುವ ಸತ್ವ ಅವರಲ್ಲಿಲ್ಲ. ಭಾರತದ ಭವಿಷ್ಯ ಜನಸಾಮಾನ್ಯರನ್ನು ಅವಲಂಬಿಸಿದೆ."

> ಭಾರತದಲ್ಲಿ ಮಧ್ಯಮವರ್ಗದವರ ಶಕ್ತಿಯೆಲ್ಲ ಬತ್ತಿಹೋಗಿದೆ. ಸುದೀರ್ಘ ಸಾಧನೆಗೆ ಬೇಕಾಗುವ ಸತ್ವ ಅವರಲ್ಲಿಲ್ಲ. ಭಾರತದ ಭವಿಷ್ಯ ಜನಸಾಮಾನ್ಯರನ್ನು ಅವಲಂಬಿಸಿದೆ.
>
> — ಸ್ವಾಮಿ ವಿವೇಕಾನಂದ

ಒಂದು ದಿನ ಮಧ್ಯಾಹ್ನ ನನ್ನೆಡೆಗೆ ಬಂದಾಗ ಆಳ ಚಿಂತನೆಯ ಭಾವ ಅವರ ಮುಖದಲ್ಲಿತ್ತು. "ದೇಶಕ್ಕೆ ಅದರಿಂದ ಒಳ್ಳೆಯದಾಗುವುದಾದರೆ ನಾನು ಸೆರೆಮನೆಗೆ ಹೋಗಲು ಸಿದ್ಧನಿದ್ದೇನೆ,"ಎಂದರು ನಾನವರ ಕಡೆ ತಿರುಗಿದೆ, ಚಕಿತನಾದೆ. ತಮ್ಮಲ್ಲಿದ್ದ ಅಪಾರ ಪ್ರತಿಭೆಯನ್ನು ಸ್ವಲ್ಪವೂ ಲೆಕ್ಕಿಸದೆ ದೇಶಕ್ಕಾಗಿ ಜೈಲಿಗೆ ಹೋಗಲು ಸಿದ್ಧರಿದ್ದಾರೆ! ಹುತಾತ್ಮನ ಕಿರೀಟವೂ ಅವರಿಗೆ ಬೇಕಿರಲಿಲ್ಲ. ಯಾವುದೇ ರೀತಿಯ ಸೋಗು ಅವರ ಪ್ರಕೃತಿಗೆ ವಿರುದ್ಧ. ಅವರ ಆಲೋಚನೆ ಯಾವಾಗಲೂ ಭಾರತದ ವಿಮೋಚನೆಯ ಕಡೆಗೇ ವಾಲಿಕೊಂಡಿತ್ತು. ಆಗ ಅಸಹಕಾರ ಚಳುವಳಿಯನ್ನು ಯಾರೂ ಕೇಳರಿಯರು. ಆದರೂ ರಾಜಕೀಯದ ಸೋಂಕೂ ಇಲ್ಲದ ಸ್ವಾಮಿ ವಿವೇಕಾನಂದರು ಮುಂಬರುವ ಘಟನೆಗಳ ಮುನ್ಸೂಚಕರಾಗಿ ನಿಂತಿರುವರು. ಅವರು ಜಪಾನಿಗೆ ಹೋಗಿದ್ದಾಗ ಜಪಾನೀಯರ ರಾಷ್ಟ್ರಭಕ್ತಿಯನ್ನು ಕಂಡು ಪ್ರಶಂಸೆಯ ಮಳೆಗರೆದಿದ್ದರು. ಉತ್ಸಾಹದ ಭರದಲ್ಲಿ ಅವರು ಹೇಳಿದರು, "ಅವರ ದೇಶವೇ ಅವರ ಧರ್ಮ. ಒಂದೇ ಒಂದು ರಾಷ್ಟ್ರೀಯ ಕೂಗು—ಡಾಯ್ ನಿಪ್ಪನ್, ಬಂಸ್ಸೈಲ್! ಮಹಾ ಜಪಾನ್, ಚಿರಾಯುವಾಗಲಿ! ದೇಶವೇ ಅವರ ಸರ್ವಸ್ವ. ದೇಶದ ಭದ್ರತೆ ಮತ್ತು ಗೌರವವನ್ನು ಉಳಿಸಿಕೊಳ್ಳುವುದಕ್ಕೆ ಅವರು ಯಾವ ತ್ಯಾಗಕ್ಕೂ ಸಿದ್ಧ."

ಸ್ವಾಮೀಜಿ ಮತ್ತು ನಾನು ಆಹ್ವಾನಿತರಾಗಿ ಒಬ್ಬ ಪಂಜಾಬಿಯ ಮನೆಗೆ ಊಟಕ್ಕೆ ಹೋಗಿದ್ದೆವು. ಅವರು ವಿವೇಕಾನಂದರಿಗೆ ಒಂದು ಒಳ್ಳೆಯ ಹುಕ್ಕವನ್ನು ಧೂಮಪಾನಕ್ಕೆ ಕೊಟ್ಟರು. ತೆಗೆದುಕೊಳ್ಳುವಾಗ ವಿವೇಕಾನಂದರು, "ನೀನು ಜಾತೀಯ ಮನೋಭಾವದವನಾದರೆ ನಿನ್ನ ಹುಕ್ಕವನ್ನು ನನಗೆ ಕೊಡಬಾರದು. ಏಕೆಂದರೆ ನಾಳೆ ಒಬ್ಬ ಜಾಡಮಾಲಿ ನನಗೆ ತನ್ನ ಹುಕ್ಕ ಕೊಟ್ಟರೂ ಸಂತೋಷದಿಂದ ಅದನ್ನು ಸೇದುತ್ತೇನೆ.ನನಗೆ ಜಾತಿಯ ಬಂಧನಗಳಿಲ್ಲ." "ಸ್ವಾಮೀಜಿ ನನ್ನ ಹುಕ್ಕವನ್ನು ಸೇದಿದರೆ ಅದು ನನ್ನ ಭಾಗ್ಯವೆಂದೆಣಿಸುತ್ತೇನೆ" ಎಂದನು ಆ ಪಂಜಾಬಿ ಗೃಹಸ್ಥ. ಸ್ವಾಮೀಜಿಯವರ ಪಾಲಿಗೆ ಅಸ್ಪೃಶ್ಯತಾ ಸಮಸ್ಯೆ ಇರಲಿಲ್ಲ. ಅವರು ತಮ್ಮ ಪರಿವ್ರಾಜಕ ಸಮಯದಲ್ಲಿ ಉತ್ತಮ ಜಾತಿಯವರಾರೂ ಹತ್ತಿರ ಸೇರಿಸದ ತೀರ ಕೀಳು ಜಾತಿಯವರಿಂದ ಆಹಾರವನ್ನು ಸ್ವೀಕರಿಸಿದ್ದರು, ಅವರ ಆದರಾತಿಥ್ಯವನ್ನು ಪಡೆದಿದ್ದರು. ಆದರೂ ವಿವೇಕಾನಂದರು ದೈನ್ಯ ಮನೋಭಾವದವರಲ್ಲ. ಅವರು ಲಾಹೋರಿನಲ್ಲಿ ವೇದಾಂತದ ಮೇಲೆ ಮಾತನಾಡುವಾಗ ಎದೆಯೆತ್ತಿ ಮುಖ ವರಳಿಸಿ "ನಾನೊಬ್ಬ ಅತ್ಯಂತ ಹೆಮ್ಮೆಯ ವ್ಯಕ್ತಿ" ಎಂದು ಸಾರಿದ್ದರು. ಆ ಹೆಮ್ಮೆ ಸಾಮಾನ್ಯ ಧನ ಮಾನಾದಿ ಮದದಿಂದ ಬಂದುದಲ್ಲ. ಆದರೆ ಅದು ತಾನೊಬ್ಬ ಶ್ರೇಷ್ಠ ಪೀಳಿಗೆಗೆ ಸೇರಿದವ ನೆಂಬ ಹೆಮ್ಮೆ. ನಮ್ಮ ದೇಶದ ಜನರನ್ನು ದುಃಸ್ಥಿತಿಗಿಳಿಸಿದ ದುರ್ಬಲ ನಮ್ರತೆಗೆ ವಿರುದ್ಧವಾದುದು ಅದು.

ಮಾತುಕತೆಯಲ್ಲಿ ವಿವೇಕಾನಂದರು ತುಂಬ ನಿಷ್ಣಾತರು. ಅದರ ಮೋಹಕತೆಗೆ ಬಲಿಯಾಗದವರಿಲ್ಲ. ಅಪಾರ ಜ್ಞಾನಸಂಪತ್ತಿನಿಂದಾಗಿ ಅವರ ಸಂಭಾಷಣೆಯೊಂದು ಬೌದ್ಧಿಕ ರಸದೌತಣ. ಅವರ ದೇಶದ ವಿಚಾರವೇ ಅವರ ಚಿಂತನೆಯ ಮತ್ತು ಸಂಭಾಷಣೆಯ ಹೆಚ್ಚು ಪಾಲು ವ್ಯಾಪಿಸಿತ್ತು. ಅವರ ಆಳ ಆಧ್ಯಾತ್ಮಿಕ ಅನುಭವವೇ ಅವರ ನಂಬಿಕೆಯ ಭದ್ರ ತಳಹದಿ. ಅವರ ಭಾಷಣಗಳಲ್ಲೆಲ್ಲಾ ಇದು ಉಜ್ವಲವಾಗಿ ವ್ಯಕ್ತವಾಗಿದೆ. ಆದರೆ ಅವರ ದೇಶಭಕ್ತಿಯೂ ಅಷ್ಟೇ ಆಳವಾದುದು.

ಅಮೇರಿಕನ್ ಮತ್ತು ಇಂಗ್ಲಿಷ್ ಶಿಷ್ಯರ ಮೇಲೆ ಅವರ ಪ್ರಭಾವ ಎಂತಹುದು ಮತ್ತು ಅವರ ಮೇಲೆ ಎಷ್ಟೊಂದು ಪ್ರಭುತ್ವ ಅವರಿಗಿತ್ತು ಎಂಬುದು ಅದನ್ನು ನೋಡಿದವರಿಗೆ ಮಾತ್ರ ವೇದ್ಯ ವಾಗುವಂತಹುದು. ಆಲ್ಮೋರಾದಲ್ಲಿ ಸೋದರಿ ನಿವೇದಿತಾ ಮತ್ತು ಇತರ ಮಹಿಳಾ ಶಿಷ್ಯರ ಸೇವೆ ಮಾಡಿದ ಸಾಮಾನ್ಯ ಮುಸ್ಲಿಂ ಅಡಿಗೆಯವನಿಗೂ ಅದು ವೇದ್ಯವಾಯಿತು. ಅವನು ಲಾಹೋರಿನಲ್ಲಿ ನನಗೆ ಹೇಳಿದ, "ಈ ವಿದೇಶೀ ಮಹಿಳೆಯರು ಸ್ವಾಮೀಜಿಯವರಿಗೆ ತೋರಿಸುವ ಭಕ್ತಿ ಗೌರವ ನಮ್ಮಲ್ಲಿ ಶಿಷ್ಯನು (ಮುರಿದ್) ಧರ್ಮಗುರುವಿಗೆ (ಮುರ್ಶಿದ್) ತೋರಿಸುವುದಕ್ಕಿಂತ ಬಹುಪಾಲು ಹೆಚ್ಚಿನದು." ಸ್ವಾಮೀಜಿಯವರನ್ನು ಕಂಡಾಕ್ಷಣ ಈ ವಿದೇಶೀ ಶಿಷ್ಯರು (ಬ್ರಿಟಿಷ್ ರಾಯಭಾರಿಯ ಪತ್ನಿಯೂ ಒಬ್ಬಳು) ಅತ್ಯಂತ ಭಕ್ತಿ ಪುರಸ್ಕಾರದಿಂದ ನಿಲ್ಲುತ್ತಿದ್ದರು, ಮತ್ತು ಅವರು ಮಾತನಾಡಲು ಪ್ರಾರಂಭಿಸಿದರೆ ಮೈಯೆಲ್ಲ ಕಿವಿಯಾಗಿ ಕೇಳುತ್ತಿದ್ದರು. ಅವರ ಸಾಮಾನ್ಯ ಇಚ್ಛೆಯೂ ಆಣತಿಯಂತೆ ನೆರವೇರಿಸಲ್ಪಡುತ್ತಿತ್ತು.

ವಿವೇಕಾನಂದರು ಯಾವಾಗಲೂ ತಮ್ಮತನವನ್ನು, ತಮ್ಮ ಗಾಂಭೀರ್ಯವನ್ನು ಬಿಟ್ಟವರಲ್ಲ. ಅವರ ಸರಳತೆ ಮತ್ತು ಶ್ರೇಷ್ಠತೆ

**ಸ್ವಾಮಿ ವಿವೇಕಾನಂದರ ಚಿಂತನೆ ಭಾರತದ ಭವಿಷ್ಯದ ಪ್ರತಿಯೊಂದು ರೂಪರೇಖೆಯನ್ನೂ ವ್ಯಾಪಿಸಿತ್ತು. ತಮ್ಮ ಸರ್ವಸ್ವವನ್ನೂ ಅವರು ದೇಶಕ್ಕಾಗಿ ಜಗತ್ತಿಗಾಗಿ ನೀಡಿದರು.**

ಯಾವ ಸೋಗಿಲ್ಲದೆ ವ್ಯಕ್ತವಾಗುತ್ತಿದ್ದವು. ಒಮ್ಮೆ ಆಲ್ಮೋರದಲ್ಲಿ ಒಬ್ಬ ಪ್ರಸಿದ್ಧ ಇಂಗ್ಲಿಷ್ ಮಹಿಳೆ ಅವರನ್ನು ನೋಡಲು ಬಂದಳು. ಆಕೆ ಹಿಂದೂಧರ್ಮವನ್ನು ಬೋಧಿಸುತ್ತಿದ್ದುದಕ್ಕಾಗಿ ಸ್ವಾಮೀಜಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಅದರಲ್ಲಿ ತನ್ನ ತಪ್ಪೇನೆಂಬುದನ್ನು ತಿಳಿಯಬಯಸಿದಳು ಆಕೆ. ಸ್ವಾಮೀಜಿ ಹೇಳಿದರು: "ನೀವು (ಇಂಗ್ಲಿಷರು) ನಮ್ಮ ದೇಶವನ್ನು ತೆಗೆದುಕೊಂಡಿರಿ. ನಮ್ಮ ಸ್ವಾತಂತ್ರ್ಯವನ್ನು ಕದ್ದು ನಮ್ಮ ದೇಶದಲ್ಲೇ ನಾವು ಆಳಾಗಿ ಬದುಕುವಂತೆ ಮಾಡಿದಿರಿ. ನಮ್ಮ ಎಲ್ಲ ಸಂಪತ್ತನ್ನೂ ನೀವು ಶೋಷಿಸುತ್ತಿದ್ದೀರಿ. ಇಷ್ಟೂ ಸಾಲದೆಂಬಂತೆ ನಮ್ಮ ಧರ್ಮವನ್ನು ಬೋಧಿಸುವ ಸೋಗಿನಲ್ಲಿ, ನಮಗೆ ಉಳಿದಿರುವ ಒಂದೇ ಒಂದು ಧರ್ಮವನ್ನು ಅಪಹರಿಸಲು ಬರುತ್ತಿದ್ದೀರಿ." ಆ ಇಂಗ್ಲಿಷ್ ಮಹಿಳೆ ತಾನು ಕಲಿಯುತ್ತಿರುವುದಾಗಿಯೂ, ತನಗೆ ಬೋಧಕಳೆಂಬ ಅಹಂಭಾವವಿಲ್ಲವೆಂದೂ ಮನವಿ ಮಾಡಿಕೊಂಡಳು. ವಿವೇಕಾನಂದರು ಶಾಂತರಾದರು. ಅನಂತರ ಆಕೆಯ ಒಂದು ಭಾಷಣ ಸಭೆಯಲ್ಲಿ ಅಧ್ಯಕ್ಷತೆ ವಹಿಸಿದರು.

ಮುಂದಿನ ವರ್ಷ ಕಾಶ್ಮೀರದಲ್ಲಿ ನಾನು ಸ್ವಾಮಿ ವಿವೇಕಾನಂದರನ್ನು ಸಂಧಿಸಿದೆ. ಜೀಲಂ ನದಿಯಲ್ಲಿ ನಮ್ಮಿಬ್ಬರ ಮನೆ-ದೋಣಿಗಳು ಒಟ್ಟಿಗೆ ಕಟ್ಟಲ್ಪಟ್ಟಿದ್ದವು. ಅವರು ಕಲಕತ್ತೆಗೆ ಹಿಂದಿರುಗುವುದಕ್ಕೆ ಮುಂಚೆ ಲಾಹೋರಿನಲ್ಲಿ ನನ್ನ ಮನೆಯಲ್ಲಿ ಕೆಲವು ದಿನ ತಂಗಿದ್ದರು. ಆ ಸಂದರ್ಭದಲ್ಲಿ ಅವರಿಗೆ ತಮ್ಮ ಸಾವಿನ ಮುನ್ಸೂಚನೆಯಾಯಿತು. ಅವರು ನಿರಾಳ ಮನಸ್ಸಿನಿಂದ ಹೇಳಿದರು: "ನಾನಿನ್ನು ಮೂರು ವರ್ಷ ಬದುಕಿರುತ್ತೇನೆ. ನನಗೆ ಒಂದೇ ಒಂದು ಚಿಂತೆಯೆಂದರೆ ಅಷ್ಟರೊಳಗೆ ನನ್ನ ಎಲ್ಲ ಯೋಜನೆಗಳೂ ಕೈಗೂಡುವವೊ ಇಲ್ಲವೋ ಎಂಬುದು." ಅವರು ನಿಜವಾಗಿಯೂ ಮೂರು ವರ್ಷಗಳ ನಂತರ ದೇಹ ಬಿಟ್ಟರು. ಅದಕ್ಕೆ ಸ್ವಲ್ಪ ಮೊದಲು ನಾನವರನ್ನು ಬೇಲೂರು ಮಠದಲ್ಲಿ ಸಂಧಿಸಿದೆ. ಅಂದು ರಾಮಕೃಷ್ಣ ಪರಮಹಂಸರ ಜನ್ಮದಿನ, ಸಂಕೀರ್ತನೆ ನಡೆಯುತ್ತಿತ್ತು. ಸ್ವಾಮೀಜಿಯವರು ಭಾವೋನ್ಮತ್ತರಾಗಿ ಅದರಲ್ಲಿ ಭಾಗಿಗಳಾಗಿದ್ದರು.

ಅವರ ಚಿಂತನೆ ಭಾರತದ ಭವಿಷ್ಯದ ಪ್ರತಿಯೊಂದು ರೂಪರೇಖೆಯನ್ನೂ ವ್ಯಾಪಿಸಿತ್ತು. ತಮ್ಮ ಸರ್ವಸ್ವವನ್ನೂ ದೇಶಕ್ಕಾಗಿ ಜಗತ್ತಿಗಾಗಿ ನೀಡಿದರು. ಜಗತ್ತು ಅವರನ್ನು ಮಹಾಪ್ರವಾದಿಯೆಂದು ಶಾಂತಿದೂತನೆಂದು ಪರಿಗಣಿಸುವುದು. ಮೂರು ಖಂಡಗಳಲ್ಲೂ ಅವರ ಸಂದೇಶ ಜನಾದರಣೀಯವಾಗಿದೆ. ತಮ್ಮ ದೇಶದ ಜನತೆಗೆ ಅವರು ಅಮಿತ ಪರಾಕ್ರಮ, ಧೈರ್ಯ-ಸ್ಥೈರ್ಯ ಮತ್ತು ಅದಮ್ಯ ಇಚ್ಛಾಶಕ್ತಿ—ಇವುಗಳ ಮಹಾನಿಧಿಯನ್ನು ಬಿಟ್ಟು ಹೋಗಿರುವರು. ಭವ್ಯ ಭಾರತದ ಅರುಣೋದಯದ ಮುಂಬೆಳಕಿನಲ್ಲಿರುವರು ಸ್ವಾಮೀಜಿ. ಅವರ ಧೀರ, ಗಂಭೀರ, ಭವ್ಯ ಆಕೃತಿ ವೈಭವಯುತ ಬಲಯುತ ಭಾರತವನ್ನು ಎದುರು ನೋಡುತ್ತಿದೆ. ಮತ್ತೊಮ್ಮೆ ಭಾರತ ಶ್ರೇಷ್ಠ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲುವುದನ್ನು ಮುಂಗಾಣುತ್ತಿದೆ.

("ಸ್ವಾಮಿ ವಿವೇಕಾನಂದರ ದಿವ್ಯಸ್ಮೃತಿ" *ಎಂಬ ಗ್ರಂಥದಿಂದ*)

## ನಿಜವಾದ ರಾಷ್ಟ್ರಪ್ರೇಮ

ಒಮ್ಮೆ ಮಹಾರಾಷ್ಟ್ರದ ಪ್ರಸಿದ್ಧ ಪತ್ರಕರ್ತ ಪಂಡಿತ ಸಖಾರಾಂ ಗಣೇಶ್ ದೇವಸ್ಕರ್ ಎಂಬುವರು ತಮ್ಮಿಬ್ಬರು ಸ್ನೇಹಿತರೊಂದಿಗೆ ಸ್ವಾಮಿ ವಿವೇಕಾನಂದರನ್ನು ಕಾಣಲು ಬಂದಿದ್ದರು. ಅವರಲ್ಲೊಬ್ಬರು ಪಂಜಾಬಿನವರೆಂಬುದನ್ನು ತಿಳಿದು ಸ್ವಾಮೀಜಿ ಅವರೊಂದಿಗೆ ಪಂಜಾಬಿನ ಕ್ಷಾಮ ಪರಿಸ್ಥಿತಿ, ಅಲ್ಲಿಯ ಜನರ ಆವಶ್ಯಕತೆಗಳು ಇತ್ಯಾದಿಗಳ ಬಗ್ಗೆ ಮಾತುಕತೆ ಪ್ರಾರಂಭಿಸಿದರು. ಬಳಿಕ ಮಾತಿನ ವಿಷಯ ಕೆಳವರ್ಗಗಳ ಜನರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳ ಸುಧಾರಣೆ, ಅವರಿಗೆ ವಿದ್ಯಾಭ್ಯಾಸ ಒದಗಿಸುವಲ್ಲಿ ಮೇಲ್ವರ್ಗದವರ ಕರ್ತವ್ಯಗಳತ್ತ ಹರಿಯಿತು. ಸಂಭಾಷಣೆ ಮುಗಿದ ಬಳಿಕ ಸ್ವಾಮೀಜಿಯವರಿಂದ ಬೀಳ್ಕೊಡುವ ಮುನ್ನ ಪಂಜಾಬೀ ಸಂದರ್ಶಕನು ವಿನಯದಿಂದಲೇ ಹೇಳಿದ: "ಸ್ವಾಮೀಜಿ, ಧರ್ಮದ ಬಗ್ಗೆ ನಿಮ್ಮಿಂದ ಅನೇಕ ವಿಷಯಗಳನ್ನು ಕೇಳಬೇಕೆಂಬ ಮಹದಾಸೆಯಿಂದ ನಿಮ್ಮನ್ನು ನೋಡಲು ಬಂದೆವು. ಆದರೆ ದುರದೃಷ್ಟವಶಾತ್ ನಮ್ಮ ಮಾತುಕತೆ, ತೀರ ಸಾಮಾನ್ಯ ವಿಷಯಗಳತ್ತ ತಿರುಗಿತು. ಇಂದಿನ ದಿನ ವ್ಯರ್ಥವಾಗಿ ಕಳೆದುಹೋಯಿತು." ಅದಕ್ಕೆ ಸ್ವಾಮೀಜಿ, "ನೋಡಿ, ಎಲ್ಲಿಯವರೆಗೆ ನನ್ನ ದೇಶದ ಒಂದು ನಾಯಿಯು ಕೂಡ ಅನ್ನವಿಲ್ಲದೆ ಇರುತ್ತದೆಯೋ ಅಲ್ಲಿಯವರೆಗೆ ಅದಕ್ಕೆ ಆಹಾರವಿತ್ತು ಪೂಜಿಸುವುದೇ ನನ್ನ ಪಾಲಿಗೆ ಧರ್ಮ; ಉಳಿದುದೆಲ್ಲ ಅಧರ್ಮ!" ಈ ಮಾತು ಕೇಳಿ ಆ ಮೂವರು ಸಂದರ್ಶಕರೂ ದಂಗಾಗಿ ಹೋದರು.

ಎಷ್ಟೋ ವರ್ಷಗಳ ನಂತರ ಈ ಘಟನೆಯ ಬಗ್ಗೆ ಮಾತಾಡುತ್ತ ಪಂಡಿತ ದೇವಸ್ಕರ್ ಹೇಳುತ್ತಾರೆ—"ಸ್ವಾಮೀಜಿಯ ಆ ಮಾತುಗಳು ನನ್ನ ಅಂತರ್ಯವನ್ನೇ ಇರಿದವು. ನಿಜವಾದ ರಾಷ್ಟ್ರಪ್ರೇಮವೆಂದರೇನೆಂಬುದನ್ನು ಅಂದು ನಾನು ಕಂಡುಕೊಂಡೆ."